Bruhat Bengaluru Mahanagara Palike

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,

12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86.

# ದಿನಾಂಕ:-16-10-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ :ಬಿ12(5)/ಪಿಆರ್/35/2020-21 ದಿನಾಂಕ:21:09:2020

(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./30/2021-22 ದಿನಾಂಕ:13-10-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀಮತಿ. ಗೀತಾ ಕೀನಾಲ್ | ವಾರ್ಡ್ ಸಮಿತಿ ಸದಸ್ಯರು |
| 3. | ಶ್ರೀಮತಿ. ಮಂಜುಳಾ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀ ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. |
| 5. | ಶ್ರೀ. ಆಕಾಶ್ | ವಾರ್ಡ್ ಸಮಿತಿ ಸದಸ್ಯರು |
| 6. | ಶ್ರೀ. ಎಚ್ ಎಂ ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು. |
| 7. | ಶ್ರೀ. ಛಾಯಾಪತಿ | ಕಿರಿಯ ಆರೋಗ್ಯ ಪರೀವಿಕ್ಷಕರು. |
| 8. | ಶ್ರೀ. ರಾಜ್‌ಗೋಪಾಲ್ | ಕಂದಾಯ ಪರೀವಿಕ್ಷಕರು. |
| 9. | ಶ್ರೀ. ಸುನೀಲ್ | ಮಾಷಲ್ ವಾರ್ಡ್ ಸಂಖ್ಯೆ-67. |
| 10. | ಶ್ರೀ. ಸತೀಶ್ | ಬೀದಿ ದೀಪ ಗುತ್ತಿಗೆದಾರರು. |
| 11. | ಶ್ರೀ. ಲೋಕೇಶ್ | ಪಶು ಪಾಲನ ವಿಭಾಗ |
| 12. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ |
| 13. | ಶ್ರೀ.ಮಂಜು | ಸಹಾಯಕ ಪೋಲೀಸ್ ಇನ್ಸ್‌ಪೆಕ್ಟರ್(ಸಂಚಾರಿ) ರಾಜಾಜಿನಗರ ಪೋಲೀಸ್ ಠಾಣೆ. |
| 14. | ಶ್ರೀ.ಪ್ರವೀಣ್ ಬಿ ಪಾಟೀಲ್ | ಪೋಲೀಸ್ ಪಿಸಿ ರಾಜಾಜಿನಗರ ಪೋಲೀಸ್ ಠಾಣೆ. |
| 15. | ಶ್ರೀ. ಗಂಗಚೆಲುವಯ್ಯ | ಬೆಂ.ಜ.ಮಂ ಸಿಬ್ಬಂದಿ. |

ಪು.ತಿ.ನೋ.



Scanned by CamScanner

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಅಕ್ಟೋಬರ್ ಮಾಹೆಯ ದಿ:16/10/2021 ವಾರ್ಡ್ ಅಭಿವೃದ್ಧಿ ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯ ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಸಾಗರ್ ಹೋಟೆಲ್ ಹತ್ತಿರ ರಸ್ತೆಯಲ್ಲಿ ಗುಂಡಿ ಉಂಟಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಆಕಾಶ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ 19ನೇ ಎ ಮೈನ್‌ನಲ್ಲಿ ಗುಂಡಿಯಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ಮಂಜು<br>ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್(ಸಂಚಾರಿ)<br>ರಾಜಾಜಿನಗರ ಪೊಲೀಸ್ ಠಾಣೆ | ವಾರ್ಡ್‌ನ ಮಹಾಲಕ್ಷ್ಮೀಪುರಂನ ಪಂಚಮುಖಿ ದೇವಾಲಯದ ಹತ್ತಿರ ರಸ್ತೆಯಲ್ಲಿ ಗುಂಡಿಯಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಸ್ತೆಗಳಲ್ಲಿ ಗುಂಡಿಯಾಗಿರುವುದನ್ನು ಮುಂದಿನ 3 ದಿನಗಳೊಳಗೆ ಗುಂಡಿಯನ್ನು ಮುಚ್ಚಲು ಕಾಮಗಾರಿ ವಿಭಾಗದ ಸಹಾಯಕ ಅಭಿಯಂತರರಿಗೆ ಸೂಚಿಸಿದರು. |
| ಶ್ರೀ.ಮಂಜು<br>ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್(ಸಂಚಾರಿ)<br>ರಾಜಾಜಿನಗರ ಪೊಲೀಸ್ ಠಾಣೆ | ವಾರ್ಡ್‌ನಲ್ಲಿ ಕಸದ ವಾಹನದವರು ನಡು ರಸ್ತೆಗಳಲ್ಲಿ ವಾಹನಗಳನ್ನು ನಿಲ್ಲಿಸುತ್ತಾರೆ ಇದರಿಂದ ಟ್ರಾಫಿಕ್ ಜಾಮ್ ಉಂಟಾಗುತ್ತದೆ. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಂಚಾರಿ ಪೊಲೀಸ್‌ರವರ ದೂರಿಗೆ ಸಂಭಂದಿಸಿದಂತೆ ಕಿರಿಯ ಆರೋಗ್ಯ ಪರೀವಿಕ್ಷಕರು ಕ್ರಮವಹಿಸಲು ಸೂಚಿಸಿದರು. |
| ಶ್ರೀ ಉದಯ ಶಂಕರ್<br>1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಮಹಾಲಕ್ಷ್ಮೀಪುರಂ ಮೆಟ್ರೋ ಹತ್ತಿರ ಮನೆಯನ್ನು ಕೆಡವುತ್ತಿದ್ದು ರಸ್ತೆಗೆ ಡೆಬ್ರೀಸ್ ಬಂದಿದ್ದು ವಾಹನ ಸವಾರರಿಗೆ ಹಾಗು ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು. | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕಾಮಗಾರಿ ವಿಭಾಗದ ಸಹಾಯಕ ಅಭಿಯಂತರರಿಗೆ ಕ್ರಮವಹಿಸಲು ಸೂಚಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ನಳಪಾಕ ರಸ್ತೆಯಲ್ಲಿ ಒಳ ಚರಂಡಿ ಉಕ್ಕುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಮತ್ತು ಬೆಂಗಳೂರು ಒಳ ಚರಂಡಿ ಮಂಡಳಿರವರಿಗೆ ಕ್ರಮವಹಿಸಲು ಸೂಚಿಸಿದರು. |



ಪು.ತಿ.ನೋ.

Scanned by CamScanner

| | |
|---|---|
| ಶ್ರೀ. ಆಕಾಶ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 1ನೇ ಬ್ಲಾಕ್‌ನ ಸಿಗ್ನಲ್ಲ್ ರಾಜಾಜಿನಗರದಲ್ಲಿ ಬಸ್ ನಿಲ್ದಾಣ ಇರುವುದಿಲ್ಲ ಹೊಸ ಬಸ್ ನಿಲ್ದಾಣ ಮಾಡುವುದರಿಂದ ಸಾರ್ವಜನಿಕರಿಗೆ ಅನೂಕುಲವಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ 1ನೇ ಬ್ಲಾಕ್‌ನ ಸಿಗ್ನಲ್ಲ್ ರಾಜಾಜಿನಗರದಲ್ಲಿ ಹೊಸ ಬಸ್ ನಿಲ್ದಾಣ ಮಾಡುವ ಬಗ್ಗೆ ಪತ್ರದ ಮೂಖೇನ ತಿಳಿಸಲು ಸೂಚಿಸಿದರು. |
| ಶ್ರೀ. ಆಕಾಶ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 19ನೇ ಎ ಕ್ರಾಸ್ ಹತ್ತಿರ ಬೀದಿ ದೀಪದ ಸ್ವಿಚ್ ದುರಸ್ತಿಯಾಗಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಕಾರ್ಯಪಾಲಕ ಅಭಿಯಂತರರು ಬೀದಿ ದೀಪದವರಿಗೆ ಕ್ರಮವಹಿಸಲು ಸೂಚಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ವಿದ್ಯಾ ವರ್ದಕ ಶಾಲೆ ಹತ್ತಿರ ಅಂಗಡಿ ಮಾಲಿಕರು ಪಾದಚರಿ ಮಾರ್ಗ ಒತ್ತುವರಿ ಮಾಡಿ ಫುಟ್‌ಪಾತ್ ಮೇಲೆ ಸಾಮಗ್ರಿಗಳನ್ನು ಇಟ್ಟಿದ್ದಾರೆ ಇದರಿಂದ ಪಾದಚಾರಿ ಮಾರ್ಗದಲ್ಲಿ ಓಡಾಡುವವರಿಗೆ ಬಹಳ ತೊಂದರೆ ಉಂಟಾಗುತ್ತದೆ. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು. | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಸಹಾಯಕ ಅಭಿಯಂತರರು ಪಾದಚರಿ ಮಾರ್ಗ ಒತ್ತುವರಿ ಮಾಡಿರುವವರ ವಿರುದ್ದ ಕ್ರಮವಹಿಸಲು ಸೂಚಿಸಿದರು. |
| ಶ್ರೀ. ಗುರುಮೂರ್ತಿ<br>ಘ.ತ್ಯಾ.ನಿ ವಿಭಾಗದ ಸಿಬ್ಬಂದಿ | ವಾರ್ಡ್‌ನಲ್ಲಿ ಹಲವಾರು ಖಾಲಿ ಸೈಟ್‌ಗಳಲ್ಲಿ ಹುಲ್ಲು ಬೆಳೆದು ನಿಂತಿರುತ್ತದೆ ಇದರಿಂದ ಅಕ್ಕ ಪಕ್ಕ ಮನೆಯವರು ಕಸ ಹಾಕುತ್ತಿದ್ದಾರೆ ಇದರಿಂದ ಬಹಳ ತೊಂದರೆ ಉಂಟಾಗುತ್ತಿದೆ. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು. | ವಾರ್ಡ್‌ನ ಘ.ತ್ಯಾ.ನಿ ವಿಭಾಗದ ಗುರುಮೂರ್ತಿ ರವರ ದೂರಿಗೆ ಸಂಭಂದಿಸಿದಂತೆ ಕಂದಾಯ ಇಲಾಖೆಯವರು ಖಾಲಿ ಸೈಟ್‌ಗಳ ಮಾಲಿಕರಿಗೆ ನೋಟಿಸ್ ನೀಡಲು ಸೂಚಿಸಿದರು. |

ಪ್ರತಿಯನ್ನು

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

25/10/24

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪು.ತಿ.ನೋ.



Scanned by CamScanner